**ಇಂದು ದಿನಾಂಕಃ 11-06-2024 ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಃ- ವಾದಿ ಪರವಾಗಿ ಶ್ರೀ ಜೆ.ಪಿ.ಎ. ವಕೀಲರಿಂದಃ-**

ವಾದಿಯ ಮನೆ ತನ್ನ ತಂದೆಯಿಂದ ವಾದಿಗೆ ಬಂದಿದೆ ಎಂದರೆ ಸರಿ. ನನ್ನ ಮನೆ ನನ್ನ ತಂದೆಯಿಂದ ನನಗೆ ಬಂದಿಲ್ಲ ಎಂದರೆ ಸರಿ. ನನ್ನ ಮನೆ ನಾನು ಖರೀದಿ ಪಡೆದಿದ್ದೇನೆ. ಸದರಿ ಖರೀದಿಯನ್ನು ನೊಂದಾಯಿಸಿದ್ದೇನೆ. ನೊಂದಾಯಿತ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನನ್ನ ಮನೆಯನ್ನು ನನ್ನ ಹೆಂಡತಿಯ ಹೆಸರಿನಲ್ಲಿ ಖರೀದಿ ಮಾಡಿದ್ದೇನೆ. 2010 ರಲ್ಲಿ ಖರೀದಿ ಮಾಡಿ ನೊಂದಾಯಿಸಿದ್ದೇವೆ. ನನ್ನ ಮನೆ ಅಬ್ದುಲ ಮಜೀದ, ಮಹೇಬೂಬ, ಉಸ್ಮಾನ ಅಲಿ ರವರ ಹತ್ತಿರ ಖರೀದಿ ಪಡೆದಿದ್ದೇನೆ. ನನ್ನ ಮನೆಯನ್ನು ರೂ. 46,000/- ಗಳಿಗೆ ಖರೀದಿ ಮಾಡಿದ್ದೇನೆ. ಖರೀದಿಯಾದ ನಂತರ ನನ್ನ ಹೆಸರಿಗೆ ಸದರಿ ಮನೆ ವರ್ಗಾವಣೆ ಆಗಿರುತ್ತದೆ. ನನ್ನ ಮನೆಯ ವಿಸ್ತೀರ್ಣ 20 X 20 ಅಡಿ ಇದೆ. ನಾವು ಖರೀದಿ ಪಡೆಯುವ ಸಮಯಕ್ಕೆ ಆಗಲೇ ಕಟ್ಟಡ ನಿರ್ಮಾಣ ಆಗಿತ್ತು.

ನನ್ನ ಮನೆಯ ಉತ್ತರ ದಿಕ್ಕಿಗೆ 3.4 ಫೀಟಿನ ಸಂದಿ ಇತ್ತು ನಂತರ ವಾದಿಯ ಮನೆ ಇತ್ತು ಎಂದರೆ ಸಾಕ್ಷಿ 2 ಫೀಟಿನ ಸಂದಿ ಇತ್ತು ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಮೊದಲಿನಿಂದ 2 ಫೀಟ ಸಂದಿ ಇದೆ ಎಂದು ನುಡಿಯುತ್ತಾರೆ. ನನ್ನ ಮನೆಯ ಖರೀದಿ ಪತ್ರದಲ್ಲಿ ನನ್ನ ಮನೆಯ ಉತ್ತರ ದಿಕ್ಕಿಗೆ 2 ಫೀಟ ಸಂದಿ ಇರುವ ಬಗ್ಗೆ ಉಲ್ಲೇಖವಿದೆ. ಮೊದಲಿನಿಂದ ನನ್ನ ಮನೆಯ ಉತ್ತರದಿಕ್ಕಿಗೆ 3.4 ಫೀಟಿನ ಸಂದಿ ಇದೆ ಎಂದರೆ ಸರಿಯಲ್ಲ.

2013 ರಲ್ಲಿ ವಾದಿಯ ಹೆಸರಿನಲ್ಲಿ ಅವನ ಮನೆ ವರ್ಗಾವಣೆ ಆಗಿದೆ ಎಂದರೆ ಸರಿಯಲ್ಲ. ವಾದಿ ತನ್ನ ಹೆಸರಿನಲ್ಲಿರುವ ಮನೆಯ ನಕಾಶೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದಾನೆ ಎಂದರೆ ಸಾಕ್ಷಿ ಅವನ ಹೆಸರಿನ ಮೇಲೆ ಇಲ್ಲ ಅವನ ತಂದೆ ಹೆಸರಿನ ಮೇಲೆ ಇದೆ ಎಂದು ನುಡಿಯುತ್ತಾರೆ. ವಾದಿಯ ಮನೆ ಸಂಖೆಃ 1-2-78 ಇದೆ ಎಂದರೆ ಸರಿ. ವಾದಿಯ ಮನೆ ಈಗ ನೂರುದ್ದೀನ ರವರ ಹೆಸರನಲ್ಲಿದೆ. ವಾದಿಯ ಮನೆ ಯಾರ ಹೆಸರನಲ್ಲಿದೆ ಎಂದು ನಾನು ಕಂದಾಯ ದಾಖಲೆಗಳಲ್ಲಿ ನೋಡಿದ್ದೇನೆ. ವಾದಿಯ ಮನೆಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ವಾದಿ ಸಲ್ಲಿಸಿರುವ ದಾಖಲೆಗಳಲ್ಲಿ ವಾದಿಯ ಮನೆಯ ದಕ್ಷಿಣ ದಿಕ್ಕಿಗೆ 3.4 ಪೀಟಿನ ಸಂದಿ ಇದೆ ಎಂದರೆ ಸಾಕ್ಷಿ ಅಷ್ಟು ಅಳತೆಯ ಸಂದಿ ಇರುವುದಿಲ್ಲ ಎಂದು ನುಡಿಯುತ್ತಾರೆ.

1994 ರಲ್ಲಿ ನನ್ನ ಮನೆಯ ಪೂರ್ವಮಾಲೀಕರಾದ ಮಹೆಬೂಬ ಮತ್ತು ಇತರರು ಕಟ್ಟಡ ರಚನೆಗಾಗಿ ಪರವಾನಿಗೆ ಪಡೆದಿದ್ದರು ಎಂದರೆ ಸರಿ. ಆಗ ನನ್ನ ಪೂರ್ವಮಾಲೀಕರಿಗೆ ನಕಾಶೆ ಸಹ ನೀಡಿರುತ್ತಾರೆ ಎಂದರೆ ಸರಿ. 1994 ರಲ್ಲಿ ಕಟ್ಟಡ ರಚನೆ ಪರವಾನಿಗೆ ನೀಡುವ ಸಮಯಕ್ಕೆ ಮೈನುದ್ದೀನ ರವರು ಪಟ್ಟಣ ಪಂಚಾಯತಿಯ ಸದಸ್ಯರು ಇದ್ದರು ಎಂದರೆ ಸರಿಯಲ್ಲ. ಕಟ್ಟಡ ರಚನೆಯ ಪರವಾನಿಗೆ ನೀಡುವ ಸಲುವಾಗಿ ಪಂಚನಾಮೆ ಮಾಡಿದ್ದರು ಎಂದರೆ ಸರಿ. ಸದರಿ ಪಂಚನಾಮೆ ಮಾಡುವ ಸಮಯಕ್ಕೆ ನನ್ನ ತಂದೆ ಸಹ ಹಾಜರಿದ್ದರು ಎಂದರೆ ಸರಿ. ಪಂಚನಾಮೆ ಸಮಯಕ್ಕೆ ಫತೀಯೋದ್ದೀನ, ಬಲರಾಮ, ಚಾಂದಸಾಬ, ಮೈನೋದ್ದೀನ, ನಿಯಾಮತ, ನನ್ನ ತಂದೆ, ನಾಗಣ್ಣ ಮತ್ತು ಅಬ್ದುಲ ಲತೀಫ್ ರವರು ಇದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ನಾಗಣ್ಣ ಮಾತ್ರ ಇರಲಿಲ್ಲ ಉಳಿದವರು ಇದ್ದರು ಎಂದು

-

ನುಡಿಯುತ್ತಾರೆ. ಸದರಿ ಪಂಚನಾಮೆಯಲ್ಲಿ ನನ್ನ ಮನೆಯ ಉತ್ತರ ದಿಕ್ಕಿಗೆ 3.4 ಫೀಟಿನ ಸಂದಿ ಇದೆ ಎಂದು ಉಲ್ಲೇಖವಿದೆ ಎಂದರೆ ಸರಿಯಲ್ಲ. ಆ ಸಮಯಕ್ಕೆ ನನ್ನ ತಂದೆ ಮತ್ತು ಇತರರು ಪರಿಶೀಲಿಸಿ ಸಹಿ ಮಾಡಿದ್ದಾರೆ ಎಂದರೆ ಸಾಕ್ಷಿ ಆಗ ನಾನು ಇರಲಿಲ್ಲ ಎಂದು ನುಡಿಯುತ್ತಾರೆ. ನನ್ನ ಪೂರ್ವ ಮಾಲೀಕರು ತಮ್ಮ ಅರ್ಜಿಯಲ್ಲಿ ನನ್ನ ಮನೆಯ ಉತ್ತರ ದಿಕ್ಕಿಗೆ 3.4 ಫೀಟಿನ ಸಂದಿ ಇದೆ ಎಂದು ಉಲ್ಲೇಖಿಸಿದ್ದಾರೆ ಎಂದರೆ ಸರಿಯಲ್ಲ.

2018 ರಲ್ಲಿ ನಾನು ಮನೆ ಕಟ್ಟಡ ನಿರ್ಮಾಣ ಮಾಡಲು ಪ್ರಾರಂಭಿಸಿದ್ದೇನೆ ಎಂದರೆ ಸರಿಯಲ್ಲ. ದಿನಾಂಕಃ 17-09-2018 ರಂದು ನಾನು ಮನೆ ಕಟ್ಟಲು ಪ್ರಾರಂಭಿಸಿದಾಗ ವಾದಿ ಪಟ್ಟಣ ಪಂಚಾಯತಿಗೆ ತಕರಾರು ಸಲ್ಲಿಸಿದ್ದ ಎಂದರೆ ಸಾಕ್ಷಿ ಆಗ ಚೀಫ್ ಆಫೀಸರ ಸ್ಥಳಕ್ಕೆ ಬಂದಿದ್ದರು ಎಂದು ನುಡಿಯುತ್ತಾರೆ. ದಿನಾಂಕಃ 20-09-2018 ರಂದು ನನ್ನ ಹೆಂಡತಿ ಕಟ್ಟಡ ನಿರ್ಮಾಣ ಮಾಡಲು ಯಾವುದೇ ಪರವಾನಿಗೆ ನೀಡಿರುವುದಿಲ್ಲ ಎಂದು ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಾನು ಖರೀದಿ ಮಾಡಿದ್ದೇನೆ ಎಂದು ಹೇಳಿದ್ದ ದಾಖಲೆ ನೊಂದಣಿ ಆಗಿರುವುದಿಲ್ಲ ಎಂದೆ ಸರಿಯಲ್ಲ. ನನ್ನ ಪೂರ್ವಮಾಲೀಕರಿಂದ ಶಪಥ ಪತ್ರದ ಮೇಲೆ ಸಹಿ ಪಡೆದಿದ್ದೇವೆ ಎಂದರೆ ಸರಿಯಲ್ಲ. ನಿಡಿ-1 ರಲ್ಲಿ ಮನೆಯ ಉತ್ತರ ದಿಕ್ಕಿಗೆ ಸಂದಿಯನ್ನು ಮುಚ್ಚಿಟ್ಟು ನೂರುದ್ದೀನ ರವರ ಮನೆಯೆಂದು ತೋರಿಸಲಾಗಿದೆ ಎಂದರೆ ಸರಿಯಲ್ಲ. ನಿಡಿ-1 ರಲ್ಲಿ ಮನೆ ಸಂಖ್ಯೆ ಉಲ್ಲೇಖವಿಲ್ಲ ಎಂದರೆ ಸರಿ. ನಿಡಿ-1 ರಲ್ಲಿ ಮಾಡಿದ ಸಹಿಯನ್ನು ಗುರುತಿಸಲು ಯಾವುದೇ ವಕೀಲರ ಸಹಿ ಇರುವುದಿಲ್ಲ ಎಂದರೆ ಸಾಕ್ಷಿ ದಾಖಲೆಯಲ್ಲಿ ಹೇಗೆ ಇದೆ ಹಾಗೆ ಇದೆ ಎಂದು ನುಡಿಯುತ್ತಾರೆ. ನಿಡಿ-1 ರ ಪ್ರಕಾರ ಮನೆ ದಾನ ನೀಡಲಾಗಿದೆ ಎಂದು ಬರೆದಿದ್ದಾರೆ ಎಂದರೆ ಸರಿ. ನನ್ನ ಪೂರ್ವಮಾಲೀಕರು ನನಗೆ ನನ್ನ ಮನೆಯನ್ನು ದಾನ ನೀಡಿಲ್ಲ ಎಂದರೆ ಸರಿ. ನಿಡಿ-1 ರ ದಾಖಲೆ ಬರೆಯುವ ಮೊದಲು ನನ್ನ ಮನೆಯ ಮಾಲೀಕ ಮತ್ತು ಕಬ್ಜೆದಾರ ನನ್ನ ಪೂರ್ವಮಾಲೀಕರು ಇದ್ದರು ಎಂದರೆ ಸಾಕ್ಷಿ ನಾನೇ ಇದ್ದೆ ಎನ್ನುತ್ತಾರೆ. ಈಗ 40 ವರ್ಷಗಳ ಹಿಂದ ನನ್ನ ಮನೆಯಲ್ಲಿ ನಾನು ಕಬ್ಜೆ ಇದ್ದೇನೆ. ಈಗ 40 ವರ್ಷಗಳ ಹಿಂದೆ ನನ್ನ ಪೂರ್ವಮಾಲೀಕರಿಗೆ ನಾನು ನಲವತ್ತು ಸಾವಿರ ರೂಪಾಯಿ ಹಣ ನೀಡಿದ್ದೇನೆ. ನಿಡಿ-1 ರ ದಾಖಲೆ 2010 ರ ದಾಖಲೆ ಅಲ್ಲ ಎಂದರೆ ಸರಿಯಲ್ಲ. ನಿಡಿ-1 ರ ದಾಖಲೆ 2007 ನೇ ಇಸವಿಯಲ್ಲಿ ಬರೆಯಲಾಗಿತ್ತು ಎಂದರೆ ಸರಿಯಲ್ಲ.

ನಾನು ಖರೀದಿ ಮಾಡಿದ ನಂತರ ಕಟ್ಟಡ ರಚನೆಗಾಗಿ ಪರವಾನಿಗೆ ಪಡೆದಿದ್ದೇನೆ. 2012 ರಲ್ಲಿ ಕಟ್ಟಡ ರಚನೆಗಾಗಿ ಪರವಾನಿಗೆ ಪಡೆದಿದ್ದೇನೆ. 2012 ರಲ್ಲಿ ಪರವಾನಿಗೆ ಪಡೆಯುವ ಸಮಯಕ್ಕೆ ನಕಾಶೆಯನ್ನು ಸಹ ಪಡೆದಿದ್ದೇನೆ. ಪರವಾನಿಗೆ ಪಡೆದ ನಂತರ ಕಟ್ಟಡ ಪುನರ ನಿರ್ಮಾಣ ಮಾಡಿದ್ದೇನೆ. ನನ್ನ ಪೂರ್ವಮಾಲೀಕರಿಂದ ನನ್ನ ಹೆಂಡತಿಯ ಹೆಸರಿನಲ್ಲಿ ನನ್ನ ಮನೆ ವರ್ಗಾವಣೆ ಆಗಿರುತ್ತದೆ. ನಾನು ಖರೀದಿ ಮಾಡುವ ಮೊದಲು ನನ್ನ ಮನೆಯ ಸಂಖ್ಯೆಃ 13 ಇತ್ತು.

**ಮುಂದುವರೆದ ಪಾಟೀಸವಾಲಿಗಾಗಿ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**C/C ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**